ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 21/2021**
**ಫ್ರಾಸಾ- 7 ಚಾಸಾ- 7**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಮುಬಾರಕ್ |
| ತಂದೆಯ ಹೆಸರುಃ | : | ಮೊಹಮದ್ ಆಲಿ |
| ವಯಸ್ಸುಃ | : | 30 ವರ್ಷ |
| ಉದ್ಯೋಗಃ | : | ವೆಲ್ಡಿಂಗ್ ಕೆಲಸ |
| ವಾಸ | : | ಮಹಮದ್ ಪುರ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:21-01-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನನಗೆ ನ್ಯಾಯಾಲಯದ ಮುಂದಿರುವ ಆರೋಪಿ ಹಾಗೂ ಅಪ್ರಾಪ್ತ ವಯಸ್ಸಿನ ಬಾಲಕ ಸೈಫುಲ್ಲನ ಪರಿಚಯವಿಲ್ಲ. ನಾನು ಮೊದಲು ಹಳೇಬೀಡಿನಲ್ಲಿ ಹಾಸನ ಇಂಜಿನಿಯರಿಂಗ್ ವರ್ಕ್ಸ್ ನಲ್ಲಿ ವೆಲ್ಡಿಂಗ್ ಕೆಲಸ ಮಾಡುತ್ತಿದ್ದೆನು. ಅದರಲ್ಲಿ ಆರೋಪಿ ಮತ್ತು ಸೈಫುಲ್ಲ ಕೆಲಸ ಮಾಡುತ್ತಿರಲಿಲ್ಲ. ನನಗೆ ಚಾಸಾ-1 ರವರ ಪರಿಚಯವಿಲ್ಲ. ಆರೋಪಿ ಚಾಸಾ-1 ರವರ ಪ್ಯಾಂಟಿಗೆ ಪೇಯಿಂಟ್ ಎರಚಿದ ವಿಚಾರ ನನಗೆ ಗೊತ್ತಿಲ್ಲ. ಟಿನ್ನರ್ ನಿಂದ ಚಾಸಾ-1 ತನ್ನ ಪ್ಯಾಂಟನ್ನು ತೊಳೆಯುತ್ತಿದ್ದಾಗ ಸೈಫುಲ್ಲಾ ಬೆಂಕಿಹಚ್ಚಿದ ವಿಚಾರ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿನಾಂಕ 9-1-2020ರಂದು ನಾನು ಕೆಲಸದ ನಿಮಿತ್ತ ಹಾಸನಕ್ಕೆ ಹೋಗಿದ್ದೆನು ಎಂದರೆ ಸರಿ.

ಆಗ ಸಂಜೆ 6-30 ಗಂಟೆಗೆ ವೆಲ್ಡಿಂಗ್ ಶಾಪ್ ಬಳಿ ಬಂದಾಗ ಅಂಗಡಿ ಬಾಗಿಲು ಮುಚ್ಚಿತ್ತು ಎಂದರೆ ನನಗೆ ಗೊತ್ತಿಲ್ಲ. ಹೊರಗಡೆ ಕಬ್ಬಿಣದ ಸಾಮಾನುಗಳು ಇದ್ದವು ಅವುಗಳಿಗೆ ರೆಡ್ ಆಕ್ಸೈಡ್ ಬಣ್ಣ ಬಳಿದಿತ್ತು ಎಂದರೆ ಸರಿಯಲ್ಲ. ನಾನು ಪಕ್ಕದ ಬೈಕ್ ಗ್ಯಾರೇಜಿನ ಹುಡುಗ ನವೀನನನ್ನು ವಿಚಾರ ಮಾಡಿದಾಗ ಆತ ಸುಮಾರು 5-30 ಗಂಟೆ ಸಮಯದಲ್ಲಿ ಆರೋಪಿಯು ವೆಲ್ಡಿಂಗ್ ಶಾಪ್ ಮುಂದೆ ಕಬ್ಬಿಣದ ಹೊಸ ಬಾಕ್ಸ್ ಗಳಿಗೆ ಡಿಸ್ಟೆಂಪರ್ ಬಣ್ಣ ಬಳಿಯುತ್ತಿದ್ದನು ಆಗ ಚಾಸಾ-1 ರವರು ವೆಲ್ಡಿಂಗ್ ಶಾಪ್ ಮುಂದೆ ನಡೆದುಕೊಂಡು ಹೋಗುತ್ತಿದ್ದನು, ಆರೋಪಿಯು ಆತನ ಪ್ಯಾಂಟಿಗೆ ಏಕಾಏಕಿಯಾಗಿ ಬಣ್ಣ ಎರಚಿದನು, ಆಗ ಆತನು ಟಿನ್ನರ್ ಹಾಕಿಕೊಂಡು ಬಣ್ಣವನ್ನು ತೊಳೆಯುತ್ತಿದ್ದಾಗ ಸೈಫುಲ್ಲಾ ಬೆಂಕಿಕಡ್ಡಿ ಗೀರಿ ಪ್ಯಾಂಟಿಗೆ ಎಸೆದನು, ಅದರಿಂದಾಗಿ ಬೆಂಕಿಹತ್ತಿಕೊಂಡಿತು, ಆಗ ತಾನು ಮತ್ತು ಪಕ್ಕದ ಸೆಲೂನ್ ಅಂಗಡಿಯ ಬಸವರಾಜು ಸೇರಿ ಬೆಂಕಿ ಆರಿಸಿದೆವು ಚಸಾ-1 ರವರ ಕಾಲಿನ ಪಾದದಿಂದ ಮಂಡಿಯವರೆಗೆ ಸುಟ್ಟ ಗಾಯಗಳಾದವು, ಅವರನ್ನು ಸರ್ಕಾರಿ ಆಸ್ಪತ್ರೆಗೆ ಬಸವರಾಜು ಮತ್ತು ನವೀನ್ ಕರೆದುಕೊಂಡು ಹೋದರೆನ್ನುವ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರವಾಗಿ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ಕೇಸಿನ ವಿಷಯ ಗೊತ್ತಿದ್ದು ಆ ಬಗ್ಗೆ ನಿಪಿ-7ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**